## ನಾರಾಯಣಾಚಾರ್ಯರನ್ನು ಹುಡುಕಿಕೊಡಿ

ಕಲರ್ಸ್ ಕನ್ನಡದ 'ರಾಮಾಚಾರಿ' ಅವರದು ಸುಂದರ ಸುಖೀ ಕುಟುಂಬ. ಅಪ್ಪನಂತೆ ಮಗ ರಾಮಾಚಾರಿಯೂ ಕಟ್ಟಾ ಸಂಪ್ರದಾಯಶೀಲ. ಈ ಸುಖಿ ಸಂಸಾರದಲ್ಲಿ ಆಘಾತವೆಂಬಂತೆ ಕಳೆದ ಎರಡು ತಿಂಗಳಿನಿಂದ ನಾರಾಯಣಾಚಾರ್ಯರು (ಶಂಕರ್ ಅಶ್ವಥ್) ನಾಪತ್ತೆಯಾಗಿರುವುದು ನಮಗೆ ದುಃಖ ತಂದಿದೆ. ಮನೆಯವರೂ ಏನೂ ಆಗಿಲ್ಲವೆಂಬಂತೆ ಆರಾಮವಾಗಿದ್ದಾರೆ. ಸರಸ ವಿರಸಗಳೆರಡರಲ್ಲೂ ಅವರ ಹೆಸರೂ ಬರುತ್ತಿಲ್ಲ. ನಾರಾಯಣಾಚಾರ್ಯರನ್ನು ದಯವಿಟ್ಟು ಹುಡುಕಿಕೊಡಿ.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

## ದ್ವೇಷ, ಅಸೂಯೆ, ಹಿಂಸೆಯೇ ಹೂರಣವೇ?

ಸಿರಿ ಕನ್ನಡದಲ್ಲಿ 'ವಿಜಯದಶಮಿ' ಪ್ರಸಾರವಾಗುತ್ತಿದೆ. ಯಾವುದೇ ಧಾರಾವಾಹಿಗೆ ಒಂದು ಉದ್ದೇಶವಿರಬೇಕು. ಮನರಂಜನೆ ಅದರ ಮೂಲಧಾತು ಆಗಿರಬೇಕು. ಇಲ್ಲವೇ ಏನಾದರೂ ಒಂದು ವಿಷಯ–ವಸ್ತುವನ್ನಾದರೂ ಶೋಧಿಸುವಂತೆ ಇರಬೇಕು. ಇದರಲ್ಲಿ ಏನಿದೆ? ದ್ವೇಷ, ಅಸೂಯೆ, ಹಿಂಸೆ, ಕ್ರೌರ್ಯ. ಜೊತೆಗೆ ಕಿಡ್ನಾಪ್ ಮಾಡುವ ಸನ್ನಿವೇಶ, ಬ್ಲಾಕ್‌ಮೇಲ್ ಮಾಡುವ ತಂತ್ರಗಾರಿಕೆ. ಟೀವಿ ಮಾಧ್ಯಮ, ಮನೆಮಂದಿಯ ಜೊತೆ ನೋಡುವ ಒಂದು ಸಾಧನ. ಇನ್ನು ಮೇಲಾದರೂ ಮನರಂಜನೆ ಅಥವಾ ಏನಾದರು ಸಂದೇಶ ನೀಡುವ ಧಾರಾವಾಹಿಗಳನ್ನು ನಿರ್ಮಿಸಲಿ.



—ಕೆ. ವೀರಭದ್ರಯ್ಯ, ಕುರುಬರಹಳ್ಳಿ

## ಪದ ಪ್ರಯೋಗದಲ್ಲಿ ಎಚ್ಚರದ ಪಾಠ

ಚಂದನದ 'ಶುಭೋದಯ ಕರ್ನಾಟಕ' ತುಂಬ ಚೆನ್ನಾಗಿತ್ತು. ಹಿರಿಯ ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಕುರಿತು ಉಪಯುಕ್ತ ಮಾಹಿತಿಯನ್ನು ಹಂಚಿಕೊಂಡರು. ಕಾರ್ಯಕ್ರಮದ ನಿರೂಪಕಿ ಮಾತಿನ ಭರದಲ್ಲಿ 'ಮೋಜು ಮಸ್ತಿ' ಎಂಬ ವಾಕ್ಯ ನುಡಿದಾಗ ಸಿಂಧ್ಯಾ ಅವರು, 'ಮಸ್ತಿ' ಎಂಬ ಪದ ಪ್ರಯೋಗವನ್ನು ತುಂಬ ಸೌಮ್ಯವಾಗಿಯೇ ನಿರಾಕರಿಸಿದರು. ನಿರೂಪಕರು ಮಾತಾಡುವಾಗ, ಪದ ಪ್ರಯೋಗದ ವಿಷಯದಲ್ಲಿ ಹೇಗೆ ಎಚ್ಚರ ವಹಿಸಬೇಕೆಂದು ಪರೋಕ್ಷವಾಗಿ ಪಾಠ ಹೇಳಿದಂತಿತ್ತು. ಫಟಾಫಟ್ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳಂತೂ ತುಂಬ ಮನನೀಯವಾಗಿದ್ದವು.

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

## ಯಾರು ಹಿತವರು ಈ ಮೂವರೊಳಗೆ

ವಾರದ ಪತ್ರ

ಇತ್ತೀಚಿಗೆ ಝೀ ಕನ್ನಡದಲ್ಲಿ ಪ್ರಸಾರವಾದ 'ಕುಟುಂಬ ಅವಾರ್ಡ್ಸ್'ನಲ್ಲಿ ಉತ್ತಮ ನಿರೂಪಕರ ಪ್ರಶಸ್ತಿಗೆ ಮೂರೇ ಮೂರು ಹೆಸರುಗಳಿದ್ದವು. ಮಾಸ್ಟರ್ ಆನಂದ್, ಅನುಶ್ರೀ ಹಾಗೂ ಶ್ವೇತಾ ಚೆಂಗಪ್ಪ. ಪುರುಷರ ವಿಭಾಗದಲ್ಲಿ ಸಂಪ್ರದಾಯದಂತೆ ಮಾಸ್ಟರ್ ಆನಂದ್ ಮತ್ತು ಮಹಿಳೆಯರ ವಿಭಾಗದಿಂದ ಯಥಾಪ್ರಕಾರ ಅನುಶ್ರೀ ಉತ್ತಮ ಎಂದು ಘೋಷಿಸಲಾಯ್ತು.

ಉಳಿದದ್ದು ಶ್ವೇತಾ, ಅವರನ್ನು 'ಸೆನ್ಸೇಷನಲ್ ಆ್ಯಂಕರ್' ಎಂದು ಪುರಸ್ಕರಿಸಲಾಯಿತು. ಇಲ್ಲಿ ಸ್ಪರ್ಧೆ ಇತ್ತೇ? ನಾಮಿನೇಷನ್ ಅಗತ್ಯವಿತ್ತೇ? ಉಳಿದ ವಿಭಾಗಗಳಲ್ಲಿ ಎಂಟ್ಹತ್ತು ಸ್ಪರ್ಧಿಗಳಿದ್ದರೂ ಇಲ್ಲಿ ಮೂವರೇ ಏಕೆ?

—ವಾ. ಮುರಳೀಧರ, ತೀರ್ಥಹಳ್ಳಿ

## ಭಟ್ಟಂಗಿತನಕ್ಕೆ ಕೊನೆಯಿಲ್ಲ, ನಾಟಕೀಯತೆಯೆ ಎಲ್ಲ

ಕಲರ್ಸ್ ವಾಹಿನಿಯ 'ಬಿಗ್ ಬಾಸ್' ಆಸಕ್ತಿಯನ್ನು ಹುಟ್ಟಿಸುವಂತೆ ಇಲ್ಲ. ಸ್ಪರ್ಧಿಗಳ ನಡವಳಿಕೆ, ವರ್ತನೆ ಅತಿರೇಕದಿಂದ ಕೂಡಿದೆ. ಪ್ರತಿಯೊಬ್ಬರೂ ನಿರೂಪಕ ಸುದೀಪ್ ಅವರನ್ನು ಮೆಚ್ಚಿಸಲು ಹಾಡಿಹೊಗಳುತ್ತಾರೆ. ಭಟ್ಟಂಗಿತನ ಸ್ಪರ್ಧಿಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಕುಟುಂಬಸ್ಥರೊಂದಿಗೆ ಭೇಟಿ ಸಮಯದಲ್ಲಿ ಸ್ಪರ್ಧಿಗಳ ನಡವಳಿಕೆ–ವರ್ತನೆ ನಗೆ ತರಿಸುತ್ತದೆ. ಬದುಕಿನಲ್ಲಿ ಪ್ರತಿಕ್ಷಣವೂ ಅನಿಶ್ಚಿತ. ಸುರಕ್ಷಿತ ವಲಯದಲ್ಲಿರುವ ಇವರ ವರ್ತನೆ ನಾಟಕೀಯ. ಸುದೀಪ್ ಅವರು ವಾರದ ಭೇಟಿಯಲ್ಲಿ ಇದನ್ನು ಸ್ಪರ್ಧಿಗಳ ಗಮನಕ್ಕೆ ತಂದಿದ್ದರೆ ಚೆನ್ನಾಗಿರುತ್ತಿತ್ತು.

—ಸಿಹಿಮೊಗೆ ರಮೇಶ್, ಮೈಸೂರು

## ಎಲ್ಲಿಯ ಡಾರ್ವಿನ್, ಎಲ್ಲಿಯ ಕನ್ನಡತಿ...

ಕಲರ್ಸ್ ಕನ್ನಡದ 'ಕನ್ನಡತಿ' ಧಾರಾವಾಹಿ ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುತ್ತಿದೆ. ಅದರಲ್ಲಿ ಇತ್ತೀಚೆಗೆ ಬರುತ್ತಿರುವ ದೃಶ್ಯಗಳು ಅಯೋಮಯ. ಯಾವುದೂ ಸರಿಯಾಗಿ ಅರ್ಥವೇ ಆಗುತ್ತಿಲ್ಲ. ವರೂಧಿನಿ ಹೇಳುವ ಡಾರ್ವಿನ್ ಸಿದ್ಧಾಂತ ಯಾವುದಕ್ಕೂ ಸಂಬಂಧಪಡುವುದಿಲ್ಲ. ಆಕೆಯ ಪಾತ್ರವೇ ಒಂದು ರೀತಿಯಲ್ಲಿ ಅಪ್ರಸ್ತುತ. ಯಾವಾಗಲೂ ಪೇಲವ ಭಾವವನ್ನು ಪ್ರಕಟಿಸುವ ಭುವಿ, ಪದೇ ಪದೇ ಕಾಣೆಯಾಗುತ್ತಿರುವುದು ಹಾಸ್ಯಾಸ್ಪದ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಅರೆಬೆತ್ತಲೆ ಪ್ರದರ್ಶನ

ಕಲರ್ಸ್ ಕನ್ನಡದ 'ಬಿಗ್ ಬಾಸ್' ಮುಗಿಯುತ್ತಾ ಬಂದಿದೆ. ನಾಲ್ಕು ವಾರಗಳು ಮಾತ್ರ ಬಾಕಿ ಉಳಿದಿವೆ. ಇಲ್ಲಿ ಇನ್ನೂ ಏನೇನು ನೋಡಬೇಕೋ ಎಂಬ ಹೆದರಿಕೆಯಂತೂ ಇದ್ದೇ ಇದೆ. ಇಷ್ಟರ ತನಕ ಮಹಿಳಾ ಸ್ಪರ್ಧಿಗಳ ತುಂಡು ಉಡುಗೆ ನೋಡಿ ನೋಡಿ ಸಾಕಾಗಿ ಹೋಗಿತ್ತು. ಅವರಿಗೆ ಪೂರ್ತಿ ಮೈ ಮುಚ್ಚಲು ಬರುವುದೇ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇವೆ.

ಇತ್ತೀಚೆಗೆ ಪುರುಷ ಸ್ಪರ್ಧಿಗಳ ಅರೆಬೆತ್ತಲೆ ದೃಶ್ಯಗಳೂ ಸರ್ವೇ ಸಾಮಾನ್ಯವಾಗಿ ಬಿಟ್ಟಿವೆ. ಅಂಗಿಯಿಲ್ಲದೆ ಬರೀ ಚಡ್ಡಿಯಲ್ಲಿಯೇ ಓಡಾಡುವುದು, ನೃತ್ಯ ಕಲಿಯುವ ನೆಪದಲ್ಲಿ ಬಟ್ಟೆ ಎತ್ತಿ ಹೊಟ್ಟೆಯನ್ನು ತೋರಿಸಿಕೊಂಡು, ಬೆಲ್ಲಿ ಡಾನ್ಸ್ ಮಾಡುವುದು. ಹೀಗೆಲ್ಲಾ ಮಾಡಿದರೆ ಮಾತ್ರ ವೀಕ್ಷಕರ ವೋಟು ಸಿಗುತ್ತದೆ ಎಂದು ಅರ್ಥವೇ. ಕಾರ್ಯಕ್ರಮವನ್ನು ನೋಡಲು ಮುಜುಗರವಾಗುತ್ತಿದೆ.

—ಶ್ರುತಿ ಎಸ್., ಬೆಂಗಳೂರು

## ಕಾಮಿಡಿ ಎಂಬ ವಿಷಾದ-ವಿಚಿತ್ರ

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ರಿಯಾಲಿಟಿ ಶೋನಲ್ಲಿ ಗಂಡಸರನ್ನು ಅವಾಚ್ಯವಾಗಿ ನಿಂದಿಸುವ, ಕೋಲಿನಲ್ಲಿ ಹೊಡೆಯುವ, ಒದೆಯುವ ದೃಶ್ಯಗಳು ತೀರಾ ಸಾಮಾನ್ಯವಾಗಿವೆ. ಇದು ಅಸಹ್ಯ ಹುಟ್ಟಿಸುವಂತಿದೆ. ಈ ಮೂಲಕ ವಾಹಿನಿಯವರು ಸಮಾಜಕ್ಕೆ ಏನು ಸಂದೇಶ ಕೊಡಲು ಉದ್ದೇಶಿಸಿದ್ದಾರೋ ತಿಳಿಯುತ್ತಿಲ್ಲ. ಇನ್ನೂ ಅಚ್ಚರಿಯ ವಿಷಯವೇನೆಂದರೆ, ಇಂಥ ಸನ್ನಿವೇಶಗಳಿಗೆ ತೀರ್ಪುಗಾರರು ನಗುತ್ತಾ ಸಹಮತ ಸೂಚಿಸುವುದು.

—ವಿಶ್ವೇಶ್ವರ ಮ.

'ಕಾಮಿಡಿ ಕಿಲಾಡಿಗಳು' ಹೊಸ ಪ್ರಯೋಗ ಮಾಡುತ್ತಿದೆ. ಹೊಸ ಮುಖಗಳು, ವಿಶೇಷವಾಗಿ, ಉತ್ತರ ಕರ್ನಾಟಕದ ಹಾಸ್ಯ ಕಲಾವಿದರು ಗಮನ ಸೆಳೆಯುತ್ತಿದ್ದಾರೆ. ಬೆಳಗಾವಿ ಜಿಲ್ಲೆಯ ರಾಮದುರ್ಗದ ಪರಿಟ್, ಗದಗದ ಹಾಸ್ಯನಟ ಜಗದೀಶ್ ಚೆನ್ನಾಗಿ ಅಭಿನಯಿಸುತ್ತಾರೆ. ರಾಯಚೂರಿನ ರಾಘವೇಂದ್ರ ಆಚಾರ್ಯ ನಿಪುಣ ಮಾತುಗಾರ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ